ಓ.ಎಸ್‌ಃ 65/2015

ಪಿ.ಡಬ್ಲ್ಯೂಃ 02

**ದಿನಾಂಕಃ 07.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಮುಖ್ಯವಿಚಾರಣೆ ವಾದಿಯ ಪರ ಶ್ರೀ. ಬಿ.ವಿ.ಪಿ. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ. ಸದರಿ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಅದರಲ್ಲಿ ಬರೆದಿರುವ ಸಂಗತಿಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ನ್ಯಾಯಾಲಯಕ್ಕೆ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಗಿದೆ.

1. ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು,
2. ನೋಟಿಸ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು,
3. ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-3 ರಿಂದ 7 ಎಂದು,
4. ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-8 ರಿಂದ 12 ಎಂದು,
5. ಖರೀದಿ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-13 ಎಂದು,
6. ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-14 ಎಂದು,
7. ನೋಟಿಸ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-15 ಎಂದು,
8. ತಹಶೀಲ್ದಾರವರಿಗೆ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-16 ಮತ್ತು 17 ಎಂದು,
9. ಖರೀದಿ ಕರಾರು ಪತ್ರವನ್ನು ಹಾಜರುಪಡಿಸಿದ್ದು, ಪ್ರತಿವಾದಿ ಪರ ವಕೀಲರು ತಕರಾರು ಸಲ್ಲಿಸಿದ್ದು ತಕರಾರಿಗೆ ಒಳಪಟ್ಟು ಅದನ್ನು ನಿಪಿ-18 ಎಂದು,
10. ಮ್ಯೂಟೇಷ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-19 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

ಓ.ಎಸ್‌ಃ 65/2015
ಪಿ.ಡಬ್ಲ್ಯೂಃ 02

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

(ಶ್ರೀ ಅಮಿತ್ ಘಟ್ಟಿ)
ದಿವಾಣಿ ನ್ಯಾಯಾಧೀಶರು ಮತ್ತು
ನ್ಯಾಯಿಕ ದಂಡಾಧಿಕಾರಿಗಳು
ಬಸವನ ಬಾಗೇವಾಡಿ.